ದಿನಾಂಕ: 27.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಕೆ ವಿ ಡಿ ವಕೀಲರಿಂದಃ**

ನನ್ನ ತಂದೆ ಹೆಸರು ಕೆಂಚಪ್ಪ. ನನ್ನ ತಂದೆಗೆ ಒಟ್ಟು 5 ಜನ ಮಕ್ಕಳು. ಮೂರು ಜನ ಹೆಣ್ಣುಮಕ್ಕಳು, ಇಬ್ಬರು ಗಂಡು ಮಕ್ಕಳು. ಗಂಡು ಮಕ್ಕಳ ಹೆಸರು ನಿಂಗಪ್ಪ ಮತ್ತು ಮೈಲಪ್ಪ, ಹೆಣ್ಣುಮಕ್ಕಳ ಹೆಸರು ಪುಟ್ಟಮ್ಮ, ಗಂಗಮ್ಮ ಮತ್ತು ಲಕ್ಷ್ಮಿದೇವಿ. ನನ್ನ ಹೆಸರು ಲಕ್ಷ್ಮಿದೇವಿ. ಪುಟ್ಟಮ್ಮನವರ ಮದುವೆಯಾದಾಗ ನಾವು ಚಿಕ್ಕವರು. ಪುಟ್ಟಮ್ಮನ ಮದುವೆಯಾಗಿ 60 ವರ್ಷ ಆಗಿದೆಯಾ ಎಂಬ ಪ್ರಶ್ನೆಗೆ ಸಾಕ್ಷಿ ತನಗೆ ಗೊತ್ತಿಲ್ಲ ತಾನು ಓದಿಲ್ಲ ಎಂದು ಹೇಳುತ್ತಾರೆ. ಗಂಗಮ್ಮನವರ ಮದುವೆಯಾಗಿ ಎಷ್ಟು ವರ್ಷಆಗಿದೆ ಎಂದರೆ ನನಗೆ ಗೊತ್ತಿಲ್ಲ. ಅವರ ಮದುವೆಯಾಗಿ 50 ವರ್ಷ ಆಗಿದೆಯಾ ಎಂದರೆ ತಾನು ಓದಿಲ್ಲ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನಗೆ ಮದುವೆಯಾಗಿ ಎಷ್ಟು ವರ್ಷಗಳಾಗಿದೆ ಎಂದು ಹೇಳಲು ಬರುವುದಿಲ್ಲ.

ನನ್ನ ಅಜ್ಜಿ ತಾತನ ಹೆಸರು ನನಗೆ ಗೊತ್ತಿಲ್ಲ. ದಾವಾಸ್ತಿ ನನ್ನ ತಂದೆ ಖರೀದಿ ಮಾಡಿದ ಜಮೀನು. ದಾವಾಸ್ತಿಯನ್ನು ಯಾವಾಗ ಖರೀದಿಸಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಕೊಂಡಿರುವ ಜಮೀನು ಎಂದು ನಮ್ಮ ವಕೀಲರಿಗೆ ಹೇಳಿ ಬರೆಸಿದ್ದೇನೆ. ನನ್ನ ವಾದ ಪತ್ರದಲ್ಲಿ ಈ ವಿಚಾರ ಹೇಳಿದ್ದೇನೆ. ವಾದಪತ್ರದಲ್ಲಿ ನನ್ನ ತಂದೆ ಕೊಂಡುಕೊಂಡಿರುವ ಜಮೀನು ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ದಾವಾಸ್ತಿ ನನ್ನ ತಂದೆಯ ಸ್ವಯಾರ್ಜಿತ ಆಸ್ತಿ ಎಂದರೆ ನಿಜ.

ಈ ಹಿಂದೆ ದಾವಾಸ್ತಿಯನ್ನು ಪಾಲುವಿಭಾಗ ಮಾಡಿಕೊಂಡಿದ್ದೇವೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಈಗ ಎರಡು ವರ್ಷಗಳಿಂದ ನನ್ನ ಅಣ್ಣನ ಮಗ ಪಾಲು ಕೊಡುವುದಿಲ್ಲ ಎಂದು ಹಿಂದೆ ಪಡೆದಿದ್ದಾರೆ ಎಂದು ಹೇಳುತ್ತಾರೆ. 20.07.2018 ರಂದು ನಾನು ಮತ್ತು ಇತರೆ ವಾದಿಗಳು ನೊಂದಾಯಿತ ವಿಭಾಗ ಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಅಣ್ಣ ಈ ಒಂದು ಆಸ್ತಿಯ ದಾಖಲೆಗೆ ಸಹಿ ಮಾಡಿ ಉಳಿದ ಆಸ್ತಿಯನ್ನು ನಿಮ್ಮ ಹೆಸರಿಗೆ

ಮಾಡಿಕೊಡುತ್ತೇನೆ ಎಂದು ಹೇಳಿ ಸಹಿ ಪಡೆದುಕೊಂಡಿದ್ದಾರೆ, ನಾವು ಒಂದು ಲಕ್ಷ ಹಣ ಪಡೆದುಕೊಂಡಿಲ್ಲ. ಮೇಲೆ ಹೇಳಿದ ಅಂಶವನ್ನು ವಾದ ಪತ್ರದಲ್ಲಿ ತಿಳಿಸಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿ ಆ ಸರ್ವೆ ನಂಬರ್ ನಲ್ಲಿ ನಾನು ವಿಭಾಗ ಕೇಳದೇ ಇದ್ದುದ್ದರಿಂದ ತಿಳಿಸಿಲ್ಲ ಎಂದು ನುಡಿಯುತ್ತಾರೆ.

ಆ ಸಹಿ ಮಾಡಿದ ಪಾಲವುವಿಭಾಗದ ಅಂಶಗಳನ್ನು ನಾನು ಓದಿ ತಿಳಿಸಿದುಕೊಂಡಿಲ್ಲ. ಸಾಕ್ಷಿ ಮುಂದುವರೆದು ಅಣ್ಣ ತಮ್ಮ ಅವರವರ ಹೆಸರಿಗೆ ಮಾಡಿಕೊಳ್ಳುತ್ತಿದ್ದಾರೆ ಎಂದಾಗ ಏನು ತಕರಾರು ಎಂದು ನಾನು ತಿಳಿದುಕೊಂಡಿಲ್ಲ. ಒಟ್ಟು ಕುಟುಂಬದ ಆಸ್ತಿಗಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿ ದಾವಾಸ್ತಿಯನ್ನು ಹೊರತು ಪಡಿಸಿ ವಿಭಾಗ ಮಾಡಿಕೊಂಡಿದ್ದಾರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ವಿಭಾಗವಾದ ವಿಚಾರವನ್ನು ದಾವೆಯಲ್ಲಿಹೇಳಲು ತೊಂದರೆ ಇರಲಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಅವರವರು ಮಾಡಿಕೊಂಡಿದ್ದರಿಂದ ನಾವು ಅದನ್ನು ಪ್ರಶ್ನಿಸಿಲ್ಲ ಎಂದು ನುಡಿಯುತ್ತಾರೆ. ಒಟ್ಟು ಕುಟುಂಬದ ಆಸ್ತಿಗಳು ವಿಭಾಗವಾಗಿ ಅವರವರೇ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆ ಪತ್ರದಲ್ಲಿ ಆದ ಆಸ್ತಿಗಳಿಗೆ ನಾನು ಪಾಲು ಕೇಳಿಲ್ಲ ಎಂದು ನುಡಿದಿರುತ್ತಾರೆ. ಪಾಲು ವಿಭಾಗದಲ್ಲಿದ್ದ ಕಾಣಿಸಿದ ಆಸ್ತಿಯನ್ನು ಪ್ರತಿವಾದಿಗಳೇ ಅನುಭವಿಸುತ್ತಿದ್ದಾರೆ ಎಂದರೆ ನಿಜ.

**(ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು